# ಕಥೋಪದೇಶ

# ಒಳ್ಳೆಯ ಭಿಕ್ಷೆ

ಸ್ವಾಮಿ ರಾಮದಾಸರು ಭಿಕ್ಷೆಗೆ ಹೊರಟಿದ್ದಾರೆ. ಅವರು ಒಂದು ಮನೆಯ ಮುಂದೆ ನಿಂತು ಭಿಕ್ಷೆ ನೀಡಬೇಕೆಂದು ಬೇಡಿದರು.

ಮನೆಯ ಒಳಗಿದ್ದ ಮನೆಯೊಡತಿಗೆ ಭಿಕ್ಷುಕನ ಧ್ವನಿ ಕೇಳಿಸಿದ ಕೂಡಲೆ ಕೋಪ ನೆತ್ತಿಗೇರಿತು. ಒಳಗಿನಿಂದಲೇ ಗುಡುಗಿದಳು:

"ಬೆಳಗಾಯಿತೆಂದರೆ ಅದೇ ಗೋಳು. ತಿರುಪೆ ಯಿಲ್ಲದೆ ಬೇರೆ ಕೆಲಸವಿಲ್ಲವೆ ನಿನಗೆ ? ಹೋಗು ಬೇರೆ ಕಡೆ."

"ನಾನು ಬರಿಗೈಯಲ್ಲಿ ಹೋಗಲಾರೆನಮ್ಮ"— ಎಂದರು ರಾಮದಾಸರು ಮುಗುಳ್ನಗುತ್ತ.

"ಸರಿ, ನಿನಗಿಂದು ಇದೇ ಭಿಕ್ಷೆ" ಎಂದು ಎಂಜಲೊರಸುವ ಬಟ್ಟೆಯ ತುಂಡನ್ನು ಹೊರಗೆ ಎಸೆದಳು.

ರಾಮದಾಸರು ಅದನ್ನು ನದಿಯ ನೀರಿನಲ್ಲಿ ತೊಳೆದು, ಅದರಿಂದ ಬತ್ತಿಯನ್ನು ಮಾಡಿದರು. ಆ ಬತ್ತಿಯನ್ನು ತೆಗೆದು ಕೊಂಡುಹೋಗಿ ದೇವಾಲಯದಲ್ಲಿ ದೀಪ ಉರಿಸಿದರು.

ಇದನ್ನೆಲ್ಲ ನೋಡಿದ ಮನೆಯೊಡತಿಗೆ ತನ್ನ ತಪ್ಪಿನ ಬಗ್ಗೆ ಪಶ್ಚಾತ್ತಾಪ ಉಂಟಾಯಿತು. ರಾಮದಾಸರ ಬಳಿಗೆ ಹೋಗಿ ಕ್ಷಮೆ ಯಾಚಿಸಿದಳು. ರಾಮದಾಸರೆಂದರು:

"ನೀನು ಒಳ್ಳೆಯ ಭಿಕ್ಷೆಯನ್ನೇ ನೀಡಿದೆ. ನಿನ್ನ ಭಿಕ್ಷೆಯಿಂದ ಈ ದೇವಾಲಯ ಬೆಳಗಿತು. ನೀನು ಆಹಾರ ನೀಡಿದ್ದರೆ ಅದು ಬಹು ಬೇಗ ನನ್ನ ಹೊಟ್ಟೆಯಲ್ಲಿ ಖಾಲಿ ಯಾಗುತ್ತಿತ್ತು."

**ಸ್ವಾಮಿ ರಾಮದಾಸರ ತಾಳ್ಮೆ, ಸಮಚಿತ್ತತೆಗಳನ್ನು ಕಂಡು ಆ ಮಹಿಳೆ ಬೆರಗಾದಳು. ಅವರ ಪಾದಕ್ಕೆರಗಿ ಹಿಂತಿರುಗಿದಳು**



ಕಲೆ : ಪುರುಷೋತ್ತಮ ಕಾರಂತ